# ಇತ್ತೀಚಿನ ಮಹಿಳಾ ಕಾವ್ಯ: ಸ್ತ್ರೀ ಸಂವೇದನೆಯ ನೆಲೆಗಳು

**ಅರುಣಕುಮಾರಿ ಬಿ.ಎನ್.***

**DOI: https://doi.org/10.5281/zenodo.22921585**

**ABSTRACT**

ಆಧುನಿಕ ಕನ್ನಡ ಮಹಿಳಾ ಕಾವ್ಯವು ಕೇವಲ ಮುಕ್ತ ಅಭಿವ್ಯಕ್ತಿಯಾಗಿರದೆ, ಪುರುಷ ಪ್ರಧಾನ ಸಮಾಜದ ಚೌಕಟ್ಟುಗಳನ್ನು ಮುರಿಯುವ ಮತ್ತು ಹೆಣ್ಣಿನ ಅಸ್ಮಿತೆಯನ್ನು ಕಟ್ಟಿಕೊಡುವ ಪ್ರಬಲ ಮಾಧ್ಯಮವಾಗಿ ಬೆಳೆದಿದೆ. ಸ್ವಾತಂತ್ರ್ಯ ಚಳುವಳಿ, ದಲಿತ–ಬಂಡಾಯ ಸಾಹಿತ್ಯ ಹಾಗೂ ಸಾಂಸ್ಥಿಕ ಪ್ರಯತ್ನಗಳ ಹಿನ್ನೆಲೆಯಲ್ಲಿ ರೂಪುಗೊಂಡ ಈ ಕಾವ್ಯಪರಂಪರೆಯು ಅಕ್ಕಮಹಾದೇವಿಯ ವಿಚಾರಧಾರೆಗಳನ್ನು ಹೊಸ ಕಾಲಘಟ್ಟದಲ್ಲಿ ಮರುಪರಿಶೀಲಿಸುತ್ತಿದೆ. ವಿವಿಧ ಕವಯಿತ್ರಿಯರ ಕವನಗಳು ಸಾಮುದಾಯಿಕ ಪ್ರಜ್ಞೆ, ಪುರಾಣ ಪಾತ್ರಗಳ ವಾಸ್ತವಿಕ ಮರುಸೃಷ್ಟಿ, ದೈನಂದಿನ ಬದುಕಿನ ತಲ್ಲಣಗಳು ಮತ್ತು ಲಿಂಗ ಸಮಾನತೆಯ ಹಂಬಲವನ್ನು ದಿಟ್ಟವಾಗಿ ಅಭಿವ್ಯಕ್ತಿಸಿವೆ. ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿಯಲ್ಲಿ ಸ್ತ್ರೀ ಸಂವೇದನೆಯ ವಿವಿಧ ನೆಲೆಗಳನ್ನು ಶೋಧಿಸುತ್ತಾ, ಸಾಮಾಜಿಕ ಸುಧಾರಣೆ ಹಾಗೂ ಸಮಕಾಲೀನ ಸವಾಲುಗಳಿಗೆ ಮಹಿಳಾ ಕಾವ್ಯವು ಹೇಗೆ ಪ್ರಬಲವಾಗಿ ಸ್ಪಂದಿಸುತ್ತಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**KEYWORDS:** ಮಹಿಳಾ ಕಾವ್ಯ, ಸ್ತ್ರೀ ಸಂವೇದನೆ, ಹೆಣ್ಣಿನ ಅಸ್ಮಿತೆ, ಲಿಂಗ ಸಮಾನತೆ, ಬಂಡಾಯ ಪ್ರಜ್ಞೆ.

* **ಡಾ. ಅರುಣಕುಮಾರಿ ಬಿ.ಎನ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ ), ಗುಬ್ಬಿ.

ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಭಾವ ಪಾರಂಪರಿಕ ಸಾಂಸ್ಕೃತಿಕ ನೆಲೆಗಟ್ಟನ್ನು ಭಿನ್ನತೆಗೆ ಕೊಂಡೊಯ್ದದ್ದು ಮಹಿಳಾ ಸಾಹಿತ್ಯ. 1976ರ ಮೈಸೂರಿನ ಲೇಖಕಿಯರ ಸಮ್ಮೇಳನ ಮತ್ತು ಬೆಂಗಳೂರಿನಲ್ಲಿ ಲೇಖಕಿಯರ ಸಂಘದ ಸ್ಥಾಪನೆ ಈ ಎರಡು ಕಾರ್ಯಗಳು ಮಹಿಳಾ ಸಾಹಿತ್ಯಕ್ಕೆ ಹೆಚ್ಚಿನ ಒತ್ತನ್ನು ಮತ್ತು ಶಕ್ತಿಯನ್ನು ತಂದುಕೊಟ್ಟವು. ಈ ಬೆಳವಣಿಗೆಯಿಂದ ಅನೇಕ ಬರವಣಿಗೆಯ ತುಡಿತ ಇರುವ ಮಹಿಳಾ ಸಾಹಿತಿಗಳು ಆ ಮೂಲಕ ಚರ್ಚೆ, ಗೋಷ್ಠಿ ಮುಂತಾದವುಗಳಲ್ಲಿ ಭಾಗವಹಿಸಿ ಆಲೋಚನೆಗೆ ತಮ್ಮನ್ನು ತಾವು ಒಡ್ಡಿಕೊಂಡದ್ದು ಹೊಸ ಆಲೋಚನೆಯ ದಿಕ್ಕನ್ನು ಮೂಡಿಸಲು ಸಾಧ್ಯವಾಯಿತು. ಇದರ ಜೊತೆಗೆ ಮಹಿಳಾ ಪ್ರಕಾಶಕರು ಮತ್ತು ದಲಿತ ಬಂಡಾಯ ಚಳುವಳಿಯ ಪ್ರಭಾವ, ಪುರುಷ ನಿರ್ಮಿತ ಹೆಣ್ಣನ್ನು ನೋಡುವ ಮತ್ತು ಪ್ರಶ್ನಿಸುವ ಮನೋಭಾವದಲ್ಲಿ ಬದಲಾವಣೆ ಮೂಡಲು ಸಾಧ್ಯವಾಯಿತು. 21ನೇ ಶತಮಾನದ ಸಾಹಿತ್ಯ ಚಿಂತನೆಯಲ್ಲಿ ಮಹಿಳಾ ಕಾವ್ಯ ಪ್ರತ್ಯೇಕ ಅಧ್ಯಯನ ಶಿಸ್ತಾಗಿ ಬೆಳೆದಿದೆ. ಏಕೆಂದರೆ ಹೆಣ್ಣು ತನ್ನ ಅಸ್ತಿತ್ವವನ್ನು ಮತ್ತು ಅಸ್ಮಿತೆಯನ್ನು ಸಾಮಾಜಿಕ ಸುಧಾರಣೆಯ ಒಂದು ಭಾಗವಾಗಿ ಕಂಡುಕೊಳ್ಳಬೇಕೆಂಬ ದೃಢ ಆಶಯ ಅವಳಲ್ಲಿದೆ. ಏಕೆಂದರೆ ಆ ಮೂಲಕ ಸಮಾಜದ ತೀಕ್ಷ್ಣ ಮನಸ್ಥಿತಿಯನ್ನು ಪ್ರಶ್ನಿಸುವ ಮತ್ತು ಪರಿಸ್ಥಿತಿಯನ್ನು ಬದಲಾಯಿಸುವ ಹಂತಕ್ಕೆ ತಲುಪಬಹುದೆಂಬ ದೃಢವಾದ ನಿಲುವು ಅವಳದು. ಈ ನಿಟ್ಟಿನಿಂದ ಕಾವ್ಯ ಸ್ಪಂದನೆ ಮತ್ತು ಸಂವೇದನೆ ಎರಡನ್ನೂ ಬಯಸುವಂಥದ್ದು.

ಅಕ್ಕನ ಪ್ರೇರಣೆಯಿಂದ ಚಾಲನೆ ಪಡೆದ ಮಹಿಳಾ ಕಾವ್ಯ ಇಂದು ಅಕ್ಕನನ್ನು ಪ್ರಾತಿನಿಧಿಕವಾಗಿ ಪ್ರಶ್ನಿಸುವ ಮತ್ತು ಪುರಸ್ಕರಿಸುವ ಘನತೆಯನ್ನು ಪಡೆದುಕೊಂಡಿದೆ. ಆ ಮೂಲಕ ಹೊಸ ಆಲೋಚನೆಗೆ ತನ್ನನ್ನು ತಾನು ಒಳಗೊಳ್ಳಬೇಕೆಂಬ ದೃಢ ನಿಲುವು ಅವಳಲ್ಲಿದೆ. ಕಾವ್ಯ ಸ್ಪಂದನೆ ಮತ್ತು ಸಂವೇದನೆ ಎರಡನ್ನೂ ಬಯಸುವಂಥದ್ದು. ಹಾಗಾಗಿ ಈ ಎರಡನ್ನೂ ತನ್ನೊಳಗೆ ಮಾಡಿ ತನ್ನ ಬರಹಗಳಿಂದಲೇ ಹೊಸ ದಿಕ್ಕಿನೆಡೆಗೆ ನಡೆಯುವಂತೆ ಮಹಿಳಾ ಕಾವ್ಯ ಮುನ್ನಡೆದಿದೆ. ಸ್ತ್ರೀ ಸಂವೇದನೆಯ ನೆಲೆಯಲ್ಲಿ ಮಹಿಳಾ ಕವಯಿತ್ರಿಯರು ಬರವಣಿಗೆ ಇಂದು ಹೊಸ ದಿಕ್ಕನ್ನು ಪಡೆದಿದೆ. ಲಿಂಗ ಸಮಾನತೆಯ ಚರ್ಚೆ ಮೊದಲು ಅಕ್ಕನಲ್ಲಿ ಕಂಡುಬಂದಿದ್ದು ಆ ಮೂಲಕ ಎಲ್ಲಾ ಮಹಿಳಾ ಅಭಿವ್ಯಕ್ತಿಗಳು ಅಕ್ಕನನ್ನೇ ಪ್ರತಿನಿಧಿಯನ್ನಾಗಿಸಿಕೊಂಡವು.

ಬೆಳಗೆರೆ ಜಾನಕಮ್ಮನವರ ಕಾವ್ಯ ಸಂಸಾರ ಮತ್ತು ಸ್ವಾಭಿಮಾನದ ನೆಲೆಯಲ್ಲಿ ಮೊದಲ ಬಾರಿಗೆ ನೋಡಬಹುದು. ಕವಿತೆ ರಚಿಸುವ ತುಡಿತ ಮತ್ತು ಸಾಮಾಜಿಕ ಪರಿಸ್ಥಿತಿಗಳು ಇವರ ಪ್ರತಿ ಕವನಗಳಲ್ಲೂ ಸಾಕ್ಷೀಕರಿಸಿವೆ.

**'ಗಂಡನೆಂದರೆ ಪ್ರಾಣ**
**ಹೆಣ್ಣೆ ನೀ ಗಂಡನ ಕೂಡಿಕೊಂಡ್ಯಾ ನೋಡು**
**ಮಂಡೂಕ ಸರ್ಪದ ನೆರಳಿಗೆ ಹೊಕ್ಕಂತೆ**
**ಎಚ್ಚರದಿಂದಿರು ಹೆಣ್ಣೇ ತಪ್ಪಿಸಲಳ ಉಂಟೆ**

**ಸ್ತ್ರೀ ಪುರುಷರ ಒಡನಾಟ'**

ಎಂಬ ಕವಿತೆಯಲ್ಲಿ ಗಂಡು ಹೆಣ್ಣಿನ ಬಾಂಧವ್ಯ ಮತ್ತು ಸ್ತ್ರೀ ಸಮಾನತೆಯ ಹಂಬಲವಿದೆ.

ನಿರ್ಲಕ್ಷಿತ ಸಮುದಾಯದ ಪ್ರತಿನಿಧೀಕರಣದಲ್ಲಿ ಬಿ. ಟಿ. ಲಲಿತಾ ನಾಯಕ್ ರವರ ಕಾವ್ಯವನ್ನು ಗುರುತಿಸಬಹುದು. ಇವರ ಕಾವ್ಯದ ಪ್ರಮುಖ ಆಶಯ ಸಮುದಾಯ ಪ್ರಜ್ಞೆ, ಆ ಮೂಲಕ ಶ್ರಮ ಸಂಸ್ಕೃತಿಯ ಜೀವನೋತ್ಸಾಹ ಮತ್ತು ಸ್ವಾತಂತ್ರ್ಯ ಇವರ ಕವಿತೆಗಳಲ್ಲಿ ಅಡಗಿದೆ.

**'ನನ್ನ ಜನರ ಮೈ ಬೆವರ ಹನಿಯಾಗಿ ಹರಿದಾಗ**
**ಭೂಮಿಗೇ ಬಂತೋ ಯೌವ್ವನ**
**ಹುಡಿಯ ತುಂಬಾ ತೆನೆಯಸರ**
**ಮುಡಿಯೊಳಗೆ ಮೊಲ್ಲೆ ಮಾಲೆ ಸೂಸಿ ನೆರೆದಾವೋ'**

ಕವಿತೆ ಕೇವಲ ಆಶಯವನ್ನು ಮಾತ್ರವಲ್ಲ ಬದುಕಿನ ಪ್ರತಿ ಕ್ಷಣವನ್ನು ಜೀವಿಸುವ ಸಮುದಾಯ ಪ್ರಜ್ಞೆಯನ್ನು ಮೇಳೈಸುತ್ತದೆ.

**'ಬೆತ್ತಲಾಗಬೇಕು ನಾವು ಬರೆ ಬೆತ್ತಲಾಗಬೇಕು**
**ಸ್ವಾರ್ಥ ವಂಚನೆಯ ಮುಸುಕು ಹರಿದೊಗೆಯ ಬೇಕು**
**ಅಂತರಂಗದ ಕಸವ ಗುಡಿಸಿ ಬಿಡಬೇಕು'**

ಎಂಬ ಮಾತು ಸಾಮುದಾಯಿಕ ಪ್ರಜ್ಞೆಯ ಮನಸ್ಸುಗಳ ಮುಕ್ತತೆಗೆ ಪರಿತಪಿಸುವುದನ್ನು ಈ ಕವಿತೆ ತಿಳಿಸುತ್ತದೆ. ಕೇವಲ ಒಂದು ವರ್ಗಕ್ಕೆ ಮಾತ್ರವಲ್ಲ ಸಮಾಜದ ಸ್ವಚ್ಛತೆಗೆ ಹಿಡಿದ ಕನ್ನಡಿಯಂತೆ ಈ ಕವಿತೆ ಇದೆ. ಪರಂಪರೆ ಮತ್ತು ಆಧುನಿಕತೆಗಳ ಮುಖಾಮುಖಿಯ ನೆಲೆಯಲ್ಲಿ ಶಶಿಕಲಾ ವೀರಯ್ಯಸ್ವಾಮಿಯವರ ಕವನಗಳು ಮುಖ್ಯವಾಗುತ್ತವೆ. ಉತ್ತರ ಕರ್ನಾಟಕದ ದೇಶೀಯತೆಯ ಸೊಗಡಿನೊಂದಿಗೆ ಹೆಣ್ಣಿನ ಮನದ ತಲ್ಲಣ ಮತ್ತು ವಾಸ್ತವತೆಯನ್ನು ಇವರ ಕವಿತೆಗಳು ಹಿಡಿದಿಡುತ್ತವೆ.

**'ನನ್ನವರ ಕವಿತೆಯು ಕಳವಳದ ಕಾವಳದಲ್ಲಿ ಮರೆತ ಮಾತೆ**
**ದಟ್ಟಡವಿಯ ಒಡಲ ಹಾಡಿನ ಮೌನಗೀತೆ**
**ನನ್ನವರ ಕವಿತೆಯು ಕತ್ತಲಲ್ಲಿ ಅತ್ತತ್ತು ಕರೆದ ಕಂಬನಿ**
**ಅರಳಿದ ಹೂದಳಗಳ ಇಬ್ಬನಿ'**

ಎಂಬ ಮಾತು ಕೇವಲ ವ್ಯಷ್ಟಿ ಪ್ರಜ್ಞೆಯಲ್ಲಿ ಮಾತ್ರವಲ್ಲದೆ ಸಮಷ್ಟಿ ಪ್ರಜ್ಞೆಯ, ಮಹಿಳಾ ಜಾಗೃತತೆಯ ಪ್ರತೀಕವೂ ಹೌದು.

**'ಹಸಿಯಾದ ಮಸಿಯ ಅಕ್ಷರಗಳ ನಡುವೆ**
**ಬೆತ್ತಲಾಗುತ್ತಾ ಪುಟ್ಟ ಸೀರೆ ಸೆರಗು ಜಾರದಂತೆ**

**ಕಳಸ ತುಂಬಿ ಗುಡಿಗೆ ಹೊರಟಿದ್ದೇನೆ'**

ಎಂಬ ಸಾಲುಗಳಲ್ಲಿ ಹೆಣ್ಣಿನ ದಿಟ್ಟತನವಿದೆ. ಮತ್ತು ಎಂತಹ ಸಂದರ್ಭದಲ್ಲಿ ತನ್ನನ್ನು ತಾನು ಸಂತಹಿಸಿಕೊಳ್ಳುವ ದೃಢತೆ ಇದೆ.

ತಾಯ್ತನದ ಹುಡುಕಾಟ ಮತ್ತು ಜೀವಸೆಲೆಯ ಪ್ರತಿಬಿಂಬಾತ್ಮಕವಾಗಿ ಲಲಿತಾ ಸಿದ್ದಬಸವಯ್ಯನವರ ಕವನಗಳನ್ನು ಗಮನಿಸಬಹುದು. ಬದುಕಿನ ವಾಸ್ತವತೆಯನ್ನು ಸರಳೀಕರಿಸಿ ಅದಮ್ಯ ಜೀವನೋತ್ಸಾಹವನ್ನು ಕವನಗಳ ಮೂಲಕ ಹಿಡಿದಿಡುವ ಶಕ್ತಿ ಇವರ ಬರಹಕ್ಕಿದೆ. ಗಂಡು ಹೆಣ್ಣಿನ ಬದುಕು ಸ್ಪರ್ಧೆಯ ಮಾನದಂಡವಾದರೆ ಹೇಗೆ? ಎಂದು ಪ್ರಶ್ನಿಸುತ್ತಲೇ

**'ಒಂದು ದಿನ ಮಾತ್ರ**
**ನಾವು ಒಂಚೂರು ಜಗಳವಾಡಲಿಲ್ಲ**
**ಅಂದು ಆದರ್ಶ ದಂಪತಿ**
**ಸ್ಪರ್ಧೆಗೆ ಹೋಗಿದ್ದೆವು ಮನೆಯಲ್ಲಿರಲಿಲ್ಲ'**

ಮನೆ ಎಂಬ ಪದ ಬದುಕಿನ ಆಗು ಹೋಗುಗಳ ಕನ್ನಡಿ ಹಾಗಾಗಿ ಬಾಂಧವ್ಯ ಭಾವನೆಗಳಿಗೆ ಅಡ್ಡಿಪಡಿಸಿದರೆ ಸಂಬಂಧಗಳ ನೀರವತೆ ಎದ್ದು ಕಾಣುತ್ತದೆ ಎಂಬುದನ್ನು ಈ ಕವನದಲ್ಲಿ ಬಿಂಬಿಸಿದ್ದಾರೆ. ಸೀತೆಯನ್ನು ದೈವಿಕ ಮತ್ತು ಆದರ್ಶ ನೆಲೆಯಲ್ಲಿಟ್ಟು ನೋಡುವ ನಾವು ಊರ್ಮಿಳೆಯನ್ನು ತೆರೆ ಹಿಂದಕ್ಕೆ ಸರಿಸುತ್ತೇವೆ. ಇಂಥ ಸಂದರ್ಭವನ್ನು ಊರ್ಮಿಳೆಯ ಪಾತ್ರದೊಂದಿಗೆ ಪ್ರಶ್ನೆ ಮಾಡುತ್ತಾರೆ.

**'ಊರ್ಮಿಳೆ,**
**ನೀನು ಒಳ್ಳೆಯದನ್ನೇ ಮಾಡಿದೆ**
**ಆ ತಿಕ್ಕಲು ಸೀತೆಯ ಹಾಗೆ**
**ಹಠ ಹಿಡಿದಿದ್ದರೆ ನಿನಗೂ**
**ಹೆಗಲೇರುತ್ತಿತ್ತು ಅಗ್ನಿಪರೀಕ್ಷೆ**
**ಜೊತೆಗೆ ಎರಡನೇ ಸುತ್ತಿನ ವನವಾಸದ ಶಿಕ್ಷೆ'**

ಎಂಬ ಸಾಲುಗಳಲ್ಲಿ ಇಡೀ ರಾಮಾಯಣದ ಪರಿಚಯ ಹೆಣ್ಣಿನ ಮೂಲಕ ಪರಿಚಿತವಾಗುತ್ತದೆ.

ಹೆಣ್ಣಿನ ಆತಂಕದ ನೆಲೆಗಳ ಪ್ರಶ್ನೆ ಮಹಿಳಾ ಕಾವ್ಯಗಳಲ್ಲಿ ದಟ್ಟವಾಗಿ ಬೇರೂರಿವೆ. ಕೆ. ಷರೀಫರ ಕವನಗಳು ಅನುಭವದ ಗ್ರಹಿಕೆ ಮತ್ತು ಹೆಣ್ಣಿನ ಅಭಿವ್ಯಕ್ತಿಯ ನೆಲೆಯ ಕೇಂದ್ರಬಿಂದುವನ್ನಾಗಿ ನಾವು ನೋಡಬಹುದು.

**'ನಾನವನ ಅರ್ಧಾಂಗಿ**
**ಅವನ ಯಾವ ಅಂಗದ ಮೇಲೆ ನನಗೆ ಅಧಿಕಾರವಿದೆ ಹೇಳು**
**ನನ್ನ ನಗು ಅಳುವಿನ ಮೇಲೂ ಅವನದೇ ಅಧಿಕಾರ'**

ಎಂಬ ಸಾಲುಗಳಲ್ಲಿ ಧಾರ್ಮಿಕ ಚೌಕಟ್ಟನ್ನು ಹೊರತುಪಡಿಸಿ ಗಂಡಿನ ಮನೋಭಿಲಾಷೆ ಹೆಣ್ಣಿನ ಮೇಲೆ ಸಾಧಿಸಿರುವ ಹಿಡಿತ ಎಲ್ಲವೂ ಕಾಣುತ್ತದೆ. ಬಂಡಾಯ ಪ್ರಜ್ಞೆ ನೆಲೆಯಲ್ಲಿ ಡಾ. ಎಚ್. ಎಲ್. ಪುಷ್ಪ ರವರ ಕವನಗಳು ಪ್ರಸ್ತುತವೆನಿಸುತ್ತವೆ.

ಇವರ ಕವನಗಳು ಪುರಾಣ ಪಾತ್ರಗಳ ನವೀಕರಣ ಮಾತ್ರವಲ್ಲ ಇದುವರೆಗೂ ಗಂಡುಮನೋ ಭೂಮಿಕೆಯಲ್ಲಿ ಕಟ್ಟಿಕೊಟ್ಟ ಪಾತ್ರಗಳನ್ನು ಭಂಜಿಸುವ ಮೂಲಕ ಹೆಣ್ಣಿನ ಸಹಜತೆಯ ಸ್ಪರ್ಶ ತೆರೆದಿಡುತ್ತದೆ.

**'ಸವಿ ಇದೆ ನೋಡು**
**ಒರಟು ಚಾಟಿಯ ಚುಂಬನದಲ್ಲಿ**
**ನವಿರಿದೆ ನೋಡು ನಾದವಿದೆ ನೋಡು**
**ಒರಟು ಬೆರಳುಗಳ ಕಂಪನದಲ್ಲಿ**
**ಏನಿದು ಮಿಡಿತ ಮುಳ್ಳುಗಳ ಮುತ್ತಿನಲ್ಲಿ**
**ಅದಕ್ಕೆ ನೋಡು ದೊರೆ ನಿನ್ನ ಚಂದನ ಗಂಡ**
**ಸುವಾಸಿತ ತೆಕ್ಕೆ ಬಿಟ್ಟು ಈ ಕಾಡುಪೊದೆಯ ಕರೆಗೆ ಹಾಡಾಗಿ ಹಾಡಿದ್ದು'**

ಎಂಬ ಸಾಲುಗಳು ಮಾನಸಿಕ ಸ್ವಾತಂತ್ರ್ಯವನ್ನು ಬಯಸುವ ಮತ್ತು ಸ್ತ್ರೀ ಸಂವೇದನೆಯ ನೈಜತೆ ಮತ್ತು ಹೆಣ್ಣಿನ ಸಹಜ ವಾಸ್ತವ ಜೀವನ ಸರಳ ಬದುಕಿನ ಅನಾವರಣ ಇಲ್ಲಿದೆ.

ಸಮಾಜ ಹೆಣ್ಣು ಗಂಡು ಎಂಬ ಭೇದಭಾವಗಳನ್ನು ಮತ್ತು ಅಂತಸ್ತಿನ ಗೋಡೆಯನ್ನು ಕಟ್ಟಿಲ್ಲ. ಆದರೂ ವಾಸ್ತವತೆಯ ಬದುಕಿನ ಕಂದಕವನ್ನು ನಾವು ಮುಚ್ಚುವ ಹಂತಕ್ಕೆ ಹೋಗದೆ, ಪ್ರಶ್ನಿಸುತ್ತೇವೆ ಎಂಬ ನೆಪವನ್ನು ಇಟ್ಟುಕೊಂಡು ಇಂದು ಹೆಣ್ಣಿನ ಮೌಲ್ಯಗಳನ್ನು ಕೇವಲ ದೈಹಿಕವಾಗಿ ಅಥವಾ ಪುರಾಣ ಪಾತ್ರಗಳ ಮೂಲಕ ನಮ್ಮನ್ನು ಮಾನಸಿಕವಾಗಿ ಕುಗ್ಗಿಸುವ ಪ್ರಯತ್ನ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇಂತಹ ಪರಿಸ್ಥಿತಿಯನ್ನು ಸವಿತಾ ನಾಗಭೂಷಣ ರವರು ನೇರವಾಗಿ ಪ್ರಶ್ನಿಸುತ್ತಾರೆ. ಆದರ್ಶ ಪುರಾಣ ಸ್ತ್ರೀಯರು ಸಹ ಹೆಣ್ಣುಗಳೇ. ಹಲವು ಹಂತಗಳನ್ನು ಕಷ್ಟಗಳನ್ನು ಸಹಿಸಿಕೊಂಡು ಬದುಕಿ ಹೊಸ ದಿಕ್ಕನ್ನು ನಮಗೆ ತೋರಿಸಿಕೊಟ್ಟವರೆ. ಆದರೆ ಅವರನ್ನು ಹೆಣ್ಣಾಗಿ ನೋಡುವುದಕ್ಕಿಂತ ಆದರ್ಶ ಸ್ತ್ರೀಯನ್ನಾಗಿ ತೋರಿಸುವ ಮತ್ತು ಆ ಮೂಲಕ ನಮ್ಮೆಲ್ಲರಿಗೂ ಚೌಕಟ್ಟಿನ ಬದುಕನ್ನು ಬದುಕಬೇಕೆಂಬ ಮೌಲ್ಯವನ್ನು ಗಂಡು ಮನೋಭೂಮಿಕೆಯ ಪರದೆಯನ್ನು ಒಮ್ಮೆಲೇ ಕಿತ್ತೊಗೆಯುವ ಪ್ರಯತ್ನ ಇವರ ಕವಿತೆಗಳಲ್ಲಿದೆ.

**'ಸೀರೆ ಸುತ್ತಿಕೊಳ್ಳುವಾಗ ದ್ರೌಪದಿ**
**ಉಂಗುರ ಎತ್ತಿಕೊಳ್ಳುವಾಗ ಶಕುಂತಲೆ**
**ಒಲೆ ಒತ್ತಿಕೊಳ್ಳುವಾಗ ಸೀತೆ**

**ಯಾಕೆ, ಯಾಕೆ ನೆನಪಾಗಬೇಕು?'**

ಎಂಬ ಸಾಲುಗಳು ಸಹಜ ಹೆಣ್ಣಿನ ಪ್ರಶ್ನೆಗಳಾಗಿ ಕಂಡುಬರುತ್ತವೆ. ದಲಿತ ಮಹಿಳೆಯ ಪ್ರಶ್ನೆಗಳು ಕೇವಲ ಪ್ರಶ್ನೆಗಳಾಗಿ ಉಳಿಯಬಾರದೆಂಬುದು ತನ್ನ ಕವನಗಳ ಮೂಲಕ ಕಟ್ಟಿಕೊಟ್ಟವರು ದು. ಸರಸ್ವತಿ ರವರು. ಹೋರಾಟ, ಸಾಹಿತ್ಯ ಮತ್ತು ಹಲವು ಸಂಘಟನೆಗಳ ಮೂಲಕ ನಿತ್ಯ ಜಂಜಡಗಳಲ್ಲಿ ಬದುಕಿನ ನೋವುಗಳನ್ನು ಅನುಭವಿಸುತ್ತಿರುವ ಹೆಣ್ಣಿಗೆ ಬೆಂಬಲವಾಗಿ ನಿಂತವರು ದು. ಸರಸ್ವತಿ ರವರು.

**'ಅಂತ-ರಂಗ**
**ತರಂಗಾಂತರಂಗ**
**ಬಾಗಿಲಿಲ್ಲ ಕಿಟಕಿ ಇಲ್ಲ ಕಿಂಡಿ ಇಲ್ಲ**
**ಒಳಗೆ ಮುಳುಗಿ ಹೂತಿರುವುದೇನೋ?'**

ಎಂಬ ಮಾತುಗಳ ಮೂಲಕ ಪ್ರತಿಯೊಬ್ಬರ ಜಡಗೊಂಡ ಮನಸ್ಸಿನ ಬಾಗಿಲುಗಳನ್ನು ತಟ್ಟುತ್ತಾ ಎಚ್ಚರಿಸುತ್ತಲೇ ಇರುತ್ತಾರೆ.

ಮನುಷ್ಯನ ಮಾನಸಿಕ ತುಮುಲಗಳನ್ನು ಬಯಕೆಗಳ ಆಚೆ ತಂದು ನಿಲ್ಲಿಸುವ ಬರವಣಿಗೆ ಚೇತನ ತೀರ್ಥಹಳ್ಳಿಯವರದ್ದು. ಪ್ರೀತಿ ಮತ್ತು ಪ್ರೇಮ ಗಂಡು ಹೆಣ್ಣಿನ ನಡುವಿನ ಸಹಜ ಕ್ರಿಯೆಗಳು ಅದು ಆಕರ್ಷಣೆ ಆಗಲಿ ಅಥವಾ ಆದರ್ಶವಾಗಲಿ ಇಬ್ಬರಲ್ಲೂ ಮಿಳಿತಗೊಂಡಿದ್ದರೆ ಅದು ಸಹಜ ಪ್ರೇಮವೇ ಸರಿ ಇಲ್ಲವಾದಲ್ಲಿ ಪ್ರೇಮವು ಕ್ರೌರ್ಯ ಎಂಬುದನ್ನು ಮಂಜುಳಾ ಹುಲಿಕುಂಟೆರವರ ಕವನಗಳು ಮಾನಸಿಕ ವ್ಯಥೆಯ ಮನೋಭೂಮಿಕೆಯನ್ನು ಇನ್ನಷ್ಟು ಅಗಲವಾಗಿಸಿ ಪ್ರಶ್ನಿಸಲು, ಚರ್ಚಿಸಲು, ಸ್ವೀಕರಿಸಲು ಅಥವಾ ತಿರಸ್ಕರಿಸಲು ಬದುಕಿನಲ್ಲಿ ಗಂಡು ಹೆಣ್ಣಿಗೆ ಹಲವು ದಾರಿಗಳಿವೆ ಎಂಬುದನ್ನು ಒಮ್ಮೆಗೇ ತೀಕ್ಷ್ಣವಾಗಿ ಹಿಡಿದಿಡುವ ಪ್ರಯತ್ನ ಇವರ ಕವಿತೆಗಳಲ್ಲಿವೆ.

**'ಅವರು ಬಿತ್ತಿದ ನಂಜಿನ ನಡುವೆ ಸಿಲುಕಿದ್ದೇನೆ**
**ನೀವು ಪ್ರೇಮದ ಕವಿತೆಗಳಿಗಾಗಿ ನನ್ನ ಕಣ್ಣುಗಳ ಇಣುಕುತ್ತೀರಿ**
**ಅನ್ನ ಬೆಳೆವವನ ಹಾದಿಗೂ ಮುಳ್ಳು ನೆಡುವ**
**ನಾಡಿನ ಯಾವುದೋ ಮೂಲೆಯಲ್ಲಿ ಕೂತು**
**ಅವನ ನವಿರು ಪ್ರೇಮ ಕನಸುವುದು ಕ್ರೌರ್ಯವೆನಿಸುತ್ತಿದೆ'**

ಎಂಬ ಸಾಲುಗಳಲ್ಲಿ ವಿಷಾದ, ಅಪಹಪಿಕೆ, ನಿವೇದನೆ ಎಲ್ಲಕ್ಕಿಂತ ಹೆಚ್ಚಾಗಿ ಸಂವೇದನಾಶೀಲ ಮನಸ್ಸಿನ ದರ್ಶನವಾಗುತ್ತದೆ.

ಒಟ್ಟಾರೆಯಾಗಿ ಮಹಿಳಾ ಕಾವ್ಯ ಮುಕ್ತ ಅಭಿವ್ಯಕ್ತಿ ಮತ್ತು ಸಾಂಪ್ರದಾಯಿಕ ಚೌಕಟ್ಟುಗಳನ್ನು ಮುರಿಯುವ ಕ್ರಿಯೆ ಮಾತ್ರವಲ್ಲದೆ ಸಾಮಾಜಿಕ ಪ್ರಜ್ಞೆ ರಾಜಕೀಯ ವಿಡಂಬನೆ ಮತ್ತು ಹೆಣ್ಣಿನ ಅಸ್ಮಿತೆಯ ದನಿ ಪ್ರತಿ ಮಹಿಳಾ ಕವಯಿತ್ರಿಯರ ಬರಹದಲ್ಲಿ ಅಡಗಿದೆ ಸಮಕಾಲೀನ ಸಮಾಜದ ಆತಂಕಗಳನ್ನು ಕೋಮು ಸೌಹಾರ್ದತೆಯ ಅಂಶಗಳನ್ನು ಇಂದು ಪ್ರಶ್ನಿಸುವ ಮತ್ತು ತಮ್ಮ ಬರಹಗಳ ಮೂಲಕವೇ

ಪರಿಹಾರಗಳನ್ನು ಕಂಡುಕೊಂಡು ಆ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಷ್ಟರ ಮಟ್ಟಿಗೆ ಮಹಿಳಾ ಕಾವ್ಯ ತನ್ನ ಆಲೋಚನೆಯನ್ನು ವಿಸ್ತರಿಸಿದೆ ಎಂದರೆ ತಪ್ಪಿಲ್ಲ. ಆದಾಗ್ಯೂ ಎಲ್ಲೋ ಒಂದು ಕಡೆ ಸಂಪ್ರದಾಯ, ಸಂಬಂಧ ಮತ್ತು ಸಮಾಜದ ಚೌಕಟ್ಟು ಎಂಬ ಎಳೆಗಳು ಅವಳನ್ನು ಕುಗ್ಗಿಸುವ ಅಥವಾ ಓಲೈಸುವ ಮಟ್ಟಕ್ಕೆ ಬಂದರೂ ಸಾಧಿಸುವ ಛಲ ಹೊಂದಿದ ಮಹಿಳೆಯ ಅಭಿವ್ಯಕ್ತಿಯನ್ನು ಯಾವುದೇ ಚೌಕಟ್ಟಿನ ವ್ಯಾಪ್ತಿಗೂ ಒಳಪಡದೆ ನೇರವಾಗಿ ಮಹಿಳಾ ಕಾವ್ಯಗಳು ತಮ್ಮ ಮನೋಭಿಲಾಷೆಯನ್ನು ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿವೆ.

## ಪರಾಮರ್ಶನ ಗ್ರಂಥಗಳು:

1. ಪುಷ್ಪ ಎಚ್. ಎಲ್., (1992), ಅಮೃತಮತಿಯ ಸ್ವಾಗತ, ಬೆಂಗಳೂರು: ಅನ್ವೇಷಣೆ ಪ್ರಕಾಶನ.
2. ಷರೀಫಾ ಕೆ., (1997), ನೂರೇನಳ ಅಂತರಂಗ, ಬೆಂಗಳೂರು: ನಿಹರ್ಷ ಪ್ರಕಾಶನ.
3. ಲಲಿತಾನಾಯಕ್ ಬಿ. ಟಿ., (1997), ಬಿದಿರುಮೆಳೆ ಕಂಟಿಯಲಿ, ಬೆಂಗಳೂರು: ಅಂಕಿತ ಪ್ರಕಾಶನ.
4. ಲಲಿತಾ ಸಿದ್ದಬಸವಯ್ಯ, (2001), ಮೊದಲ ಸಿರಿ, ಬೆಂಗಳೂರು: ಚಿನ್ಮಯಿ ಪ್ರಕಾಶನ.
5. ಶ್ಯಾಮಸುಂದರರಾವ್ ಡಿ. ಕೆ. (ಸಂ), (2011), ಬೆಳಗೆರೆ ಜಾನಕಮ್ಮ ಕಲ್ಯಾಣ, ಬೆಂಗಳೂರು: ಕಾಮಧೇನು ಪುಸ್ತಕ ಭವನ.
6. ಮಂಜುಳಾ ಹುಲಿಕುಂಟೆ, (2024), ಹಿಪ್ಪೆ ಹೂವಿನ ಘಮಲು, ಬೆಂಗಳೂರು: ಕೌದಿ ಪ್ರಕಾಶನ.